ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1732/2018

ಚಾಸಾ:2 ಪ್ರಾಸಾ:2

ದಿನಾಂಕ: 22.04.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ರಾಜೇಶ್ |
| ತಂದೆಯ ಹೆಸರು | : | ದಿನೇಶ್ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಶೆಲೂನ್ |
| ವಾಸ ಸ್ಥಳ | : | ಕೊರ್ಗಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಆರೋಪಿಯ ಪರಿಚಯವಿಲ್ಲ. ಮೃತ ಸಂಕು ಪೂಜಾರ್ತಿಯವರಿಗೆ ನಮ್ಮ ಪ್ರಗತಿ ಹೇರ್ ಡ್ರೆಸ್ಸಸ್ ಹುಣ್ಸೆಮಕ್ಕಿಯಲ್ಲಿ ಕಾರಿನಿಂದ ಅಪಘಾತವಾಗಿರುತ್ತದೆ. ಅನಂತರ ಆಕೆ ಮೃತಪಟ್ಟಿರುತ್ತಾರೆ. ಅಪಘಾತಪಡಿಸಿದ ವ್ಯಕ್ತಿ ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಸ್ಥಳಕ್ಕೆ ಹೋದಾಗ ಅಲ್ಲಿ ಕಾರು ಇತ್ತು. ಚಾಲಕರು ಇದ್ದರು. ಆತ ನ್ಯಾಯಾಲಯದ ಮುಂದೆ ಇರುವ ಆರೋಪಿಯಾಗಿರುತ್ತಾರೆ. ಸುಮಾರು 7 ವರ್ಷಗಳ ಹಿಂದೆ ಸದ್ರಿ ಅಪಘಾತವಾಗಿರುತ್ತದೆ. ಸಾಕ್ಷಿ ನಿಪಿ-4 ಮತ್ತು 5ನ್ನು ನೋಡಿ ಗುರುತಿಸಿರುತ್ತಾರೆ. ಪೊಲೀಸರು ಈ ವಿಚಾರವಾಗಿ ನನ್ನನ್ನು ವಿಚಾರಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ವಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:**

ದಿ: 02-02-2018 ರಂದು ಅಪಘಾತವಾಗಿರುವುದು ಎಂದರೆ ಸರಿ. ಸದ್ರಿ ದಿನ 4 ಗಂಟೆಗೆ ಅಪಘಾತವಾಗಿರುತ್ತದೆ ಎಂದರೆ ಸರಿ. ಸಂಕು ಪೂಜಾರ್ತಿರವರು ಹುಣ್ಸೆಮಕ್ಕಿ ಮಾರ್ಕೇಟು ಬಳಿ

ನಡೆದುಕೊಂಡು ಹೋಗುತ್ತಿದ್ದಾಗ ಎದುರಿನಿಂದ ಬರುತ್ತಿದ್ದ ಆರೋಪಿ ತನ್ನ ಬಾಬ್ತು ಕೆಎ-20-ಜಡ್-0762 ವಾಹನವನ್ನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ತೀರ ಬಲಕ್ಕೆ ಚಲಾಯಿಸಿಕೊಂಡು ಬಂದು ಎದುರಿನಿಂದ ಡಿಕ್ಕಿ ಹೊಡೆದ ಪರಿಣಾಮ ಆಕೆಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು ಸಂಜೆ 7-55ಕ್ಕೆ ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅಪಘಾತವಾಗಿದ್ದು, ಹೇಗೆ ಆಯಿತು ಎಂದು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ಅಪಘಾತದ ಪ್ರತ್ಯಕ್ಷದರ್ಶಿ ಎಂದರೆ ಸರಿಯಲ್ಲ. ನಾನು ಮತ್ತು ಸ್ಥಳೀಯರು ಆಕೆಯನ್ನು ಉಪಚರಿಸಿ ಆಕೆಯನ್ನು ಆಸ್ಪತ್ರೆಗೆ ದಾಖಲಿಸಿರುತ್ತೇವೆ ಎಂದರೆ ಸರಿ. ಸದ್ರಿ ಅಪಘಾತವನ್ನು ನಾನು ನೋಡಿದ್ದು ಆರೋಪಿಯ ಅತೀ ವೇಗ ನಿರ್ಲಕ್ಷ್ಯತನದ ಚಾಲನೆಯಿಂದ ಅಪಘಾತ ಸಂಭವಿಸಿ ಸಂಕು ಪೂಜಾರ್ತಿರವರು ಮೃತಪಡಲು ಕಾರಣವಾಗಿದ್ದರೂ ನನಗೆ ಪ್ರಕರಣದ ಮಾಹಿತಿ ಇದ್ದರೂ ಆರೋಪಿ ಪರಿಚಯಸ್ಥರಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ದಿಃ 3-08-2018 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಕೆ ಸಿ ಎಸ್ ರವರಿಂದಃ</u>**

ನಾನು ಅಪಘಾತದ ಪ್ರತ್ಯಕ್ಷದರ್ಶಿ ಅಲ್ಲ. ಅಪಘಾತ ಹೇಗಾಯಿತು ಎಂದು ನನಗೆ ಹೇಳಲಾಗುವುದಿಲ್ಲ. ನಾನು ಸ್ಥಳಕ್ಕೆ ಹೋದಾಗ ಸ್ಥಳೀಯರು ಗಾಯಾಳುವನ್ನು ಉಪಚರಿಸುತ್ತಿದ್ದರು. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಸದ್ರಿ ದಿನ ಕಾರಿನ ಚಾಲಕ ಆರೋಪಿಯಾಗಿದ್ದ ಎಂದು ಬೇರೆಯವರು ಹೇಳಿದ ಮೇರೆಗೆ ನನಗೆ ತಿಳಿದು ಬಂದಿರುತ್ತದೆ ಎಂದರೆ ಸರಿ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ